6) ಉದ್ಭವಿಸುವುದಿಲ್ಲ.

7) ಉದ್ಭವಿಸುವುದಿಲ್ಲ.

ವಿಷಯ:- ಗಂಗಾ ಕಲ್ಯಾಣ ಯೋಜನೆಯ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 520 (312)

ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಂಗಾ ಕಲ್ಯಾಣ ಯೋಜನೆಗಳು ಸರಿಯಾಗಿ ನಡೆಯದೇ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಇದನ್ನು ಸರಿಮಾಡಲು ಸರಕಾರವು ತೆಗೆದುಕೊಂಡ ಕ್ರಮವೇನು ಇದರ ಮೇಲೆ ಉಸ್ತುವಾರಿ ಖರ್ಚು ಇಲಾಖೆಯಿಂದ ಭರಿಸಲಾಗುವುದೇ?

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:- ಅಳಂದ ಸಕ್ಕರೆ ಕಾರ್ಖಾನೆಯಲ್ಲಿ ಚೀಲದ ಅವ್ಯವಹಾರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 521 (666)

ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಳಂದ (ಭೂಸನೂರು) ಸಕ್ಕರೆ ಕಾರ್ಖಾನೆಯಲ್ಲಿ ಚೀಲದ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಈ ಅವ್ಯವಹಾರದಲ್ಲಿ ಎಷ್ಟು ಚೀಲಗಳು ಅನಧಿಕೃತವಾಗಿ ಮಾರಾಟವಾದವು, ಇವುಗಳ ದರವೇನು?

ಆ) ಈ ವರ್ಷ ಈ ಕಾರ್ಖಾನೆಯಲ್ಲಿ ಅರೆದ ಕಬ್ಬಿನ ಪ್ರಮಾಣವೆಷ್ಟು, ಇದರಿಂದ ಎಷ್ಟು ಟನ್ ಸಕ್ಕರೆ ಉತ್ಪಾದನೆಯಾಗಿದೆ?

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು):-

ಅ) ಬಂದಿರುವುದಿಲ್ಲ.

ಆ) ಈ ವರ್ಷ ಈ ಕಾರ್ಖಾನೆಯಲ್ಲಿ 1,31,378 ಟನ್ ಕಬ್ಬು ಅರೆಯಲಾಗಿದೆ ಮತ್ತು 11,808 ಟನ್ ಸಕ್ಕರೆ ಉತ್ಪಾದಿಸಲಾಗಿದೆ.